
ISSN: 2347-2723 IMPACT FACTOR : 2.0260(UIF) VOLUME - 4 | ISSUE - 9 | APRIL - 2017

REVIEW OF LITERATURE

# ಜಿ.ಎಸ್. ಶಿವರುದ್ರಪ್ಪನವರ, ನನ್ನ ಹಣತೆ, ತೇರನೆಳೆವರು ನಾವು, ಮಬ್ಬಿನಿಂದ ಮಬ್ಬಿಗೆ ಕವನಗಳಲ್ಲಿ ಜೀವನದರ್ಶನ

ಡಾ. ಶಿವಗಂಗಾ ಯು. ಬಿಲಗುಂದಿ
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.



ಜಿ.ಎಸ್. ಶಿವರುದ್ರಪ್ಪನವರು ಫೆಬ್ರವರಿ ೦೭, ೧೯೨೬ ಶಿವಮೊಗ್ಗ ಜಿಲ್ಲೆಯ ಈಸೋರಿನಲ್ಲಿ ಕನ್ನಡ ಅಧ್ಯಾಪಕರಾಗಿ ಜೀವನ ಪಥವನ್ನಾರಂಭಿಸಿದ ಶ್ರೀಯುತರು ಕನ್ನಡ ಸಾಹಿತ್ಯ ಕ್ಷೇತ್ರದ ವಿವಿಧ ಪ್ರಕಾರಗಳಲ್ಲಿ ತಮ್ಮ ಬರವಣಿಗೆಯನ್ನು ಮಾಡಿದ್ದಾರೆ. "ಜಿಯೆಸ್ಸೆಸ್ ಈ ವರೆಗೆ ಹನ್ನೆರಡು ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ಕನ್ನಡದ ಮುಖ್ಯ ಕವಿಗಳಾಗಿ ನಲವತ್ತು ವರ್ಷಗಳಿಂದ ಕಾವ್ಯರಚನೆ ಮಾಡುತ್ತಿರುವ ಇವರ ಕಾವ್ಯ ಕೃಷಿಯನ್ನು 'ನಂಬುಗೆಯ ಹಾದಿ'ಯೆಂದು ನಾನು ಹಿಂದೆ ಗುರುತಿಸಿದ್ದುಂಟು. ಕುವೆಂಪು ಮತ್ತು ಪು.ತಿ.ನ. ಅವರ ಕಾವ್ಯ ರಚನೆಗಳಿಂದ ಬೇರೆ ಬೇರೆ ಬಗೆಯಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಪ್ರಭಾವಿತರಾಗಿ ಕವಿತೆಗಳನ್ನು ಬರೆಯತೊಡಗಿದ ಜಿ.ಎಸ್.ಎಸ್. ಮುಂದಿನ ಕನ್ನಡ ಕಾವ್ಯದ ಬೆಳವಣಿಗೆಯಲ್ಲಿ ಬೆರೆಯುತ್ತ ಬೆಳೆದರು. ನವೋದಯ, ನವ್ಯ, ಬಂಡಾಯಗಳೆಂಬ ಮಾರ್ಗಗಳು ಅವರ ಕಾವ್ಯ ರಚನೆಯನ್ನು ಪ್ರಭಾವಿಸಿವೆ"[೧]

ಜಿ.ಎಸ್.ಎಸ್. ಅವರು ಸಾಮಗಾನ ಚೆಲುವ ಒಲುವ, ಅನಾವರಣ, ದೇವ ಶಿಲ್ಪ, ದೀಪದ ಹೆಜ್ಜೆ, ತೆರೆದ ದಾರಿ, ಕಾರ್ತೀಕ, ಪ್ರೀತಿ ಇಲ್ಲದ ಮೇಲೆ, ಗೋಡೆ ಇವು ಇವರ ಕವನ ಸಂಕಲನಗಳಾಗಿವೆ. ಇವರು ಕಾದಂಬರಿಕಾರರು, ವಿಮರ್ಶಕರು, ಪ್ರವಾಸ ಕಥನಗಳು, ಗದ್ಯ ಕೃತಿಗಳನ್ನು ಹೀಗೆ ಹಲವು ಕನ್ನಡ ಸಾಹಿತ್ಯಕ್ಕೆ ಕೊಡುಗೆಯನ್ನು ನೀಡಿದ್ದಾರೆ. ಇವರಿಗೆ ಅನೇಕ ಪ್ರಶಸ್ತಿ ಮತ್ತು ಸನ್ಮಾನಗಳು ದೊರಕಿವೆ. "ನವೋದಯ ಮತ್ತು ನವ್ಯ ಮಾರ್ಗಗಳೆರಡರ ವೈಶಿಷ್ಟ್ಯಗಳನ್ನು ಇವರ ಕಾವ್ಯದಲ್ಲಿ ಕಾಣಬಹುದು. ಪ್ರಗತಿಪರ ಧೋರಣೆಯುಳ್ಳ ಇವರ ಕಾವ್ಯದ ವಸ್ತು, ವೈವಿಧ್ಯಮಯವಾಗಿದೆ. ವಸ್ತು ನಿಷ್ಠ ನಿರೂಪಣೆ, ನಿರಾಡಂಬರ ಶೈಲಿ, ಸ್ಪಷ್ಟತೆ ಪ್ರತಿಮೆಗಳ ಯಥೋಚಿತ ಬಳಕೆ, ಜಿ.ಎಸ್.ಎಸ್. ಕಾವ್ಯದ ವೈಶಿಷ್ಟ್ಯಗಳಾಗಿವೆ."[೨] ಹೀಗೆ ಕವಿಯು ಕಾವ್ಯದಲ್ಲಿ ಅನೇಕ ವಿಷಯವನ್ನು ಮನಮುಟ್ಟುವಂತೆ ರಚನೆಮಾಡಿದ್ದಾರೆ.

ಜಿ.ಎಸ್.ಎಸ್. ಅವರ ನನ್ನ ಹಣತೆಯ ಕವನ ಕುರಿತು ಹೇಳಲಾಗಿದೆ.

"ಹಣತೆ ಹಚ್ಚುತ್ತೇನೆ ನಾನೂ
.....................................
.....................................
ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ನನಗಿಲ್ಲ"[೩]

ಕವಿಯು ಬೆಳಕು, ಜ್ಞಾನ ಅರಿವುಗಳನ್ನು ದೀಪಕ್ಕೆ ಹೋಲಿಸಿದ್ದಾರೆ. ಅಂತರಂಗದ ಬೆಳಕು ಪರಸ್ಪರರಲ್ಲಿ ಪ್ರೀತಿ, ಗೌರವಗಳು ಮೂಡಲು ಅಂತರಂಗದ ಪ್ರೀತಿಯ ಬೆಳಕು ಅವಶ್ಯಕವೆನ್ನುವರು. ಬೆಳಕು ಅರಿವು ತಿಳುವಳಿಕೆಯ ಪ್ರತೀಕ. ಹಣತೆ ಮನುಷ್ಯ ಶರೀರದ ಸಂಕೇತ ಹಣತೆಗೆ ಬೆಲೆ ಬುರುವುದ ಅದರಿಂದ ಬೆಳಕುಹೊರಸೋಸಿದಾಗ ಮಾತ್ರ. ದ್ವೇಷ, ಅಸೂಯೆಗಳೆಂಬ ಅಜ್ಞಾನವನ್ನು ಅಳಿಸಿಹಾಕಲು ಅರಿವಿನ ಬೆಳಕಿನ ಅವಶ್ಯಕತೆ ಇದೆ ಅದಕ್ಕಾಗಿ ಪ್ರತಿಯೊಬ್ಬನೂ ಹಣತೆಯನ್ನು ಹಚ್ಚಲು ಹೇಳುವರು. ಹಣತೆಯನ್ನು ನಾನು ಹಚ್ಚುತ್ತೇನೆ. ಈ ಅಜ್ಞಾನದಕತ್ತಲನ್ನು ಗೆದ್ದು ನಿಲ್ಲುತ್ತೇನೆಂಬ ಬಿದ್ದಿನಿಂದಿಲ್ಲ. ಲೆಕ್ಕವೇ ಇರದ ದೀಪಾವಳಿಯ ಹಡುಗಗಳೆ ಇದರಲ್ಲಿ ಮುಳುಗಿ ಕರಗಿರುವಾಗ ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ನನಗಿಲ್ಲ.

"ಹಣತೆ ಹಚ್ಚುತ್ತೇನೆ ನಾನೂ

......................................
......................................
ಇನ್ನೂ ಬೇಕು ಎನ್ನುವ ಬಯಕೆ"[೪]

ಈ ಕತ್ತಲಿನಿಂದ ಬೆಳಕಿನ ಕಡೆಗೆ ನಡೆದೇನೆಂಬ ಆಸೆಯಿಂದಲ್ಲ ಹಣತೆ ಹಚ್ಚುವುದು. ಶತಮಾನದಿಂದಲೂ ನೋಡಿದರೆ ಕತ್ತಲಿನಿಂದ ಕತ್ತಲಿಗೇ ಹೆಜ್ಜೆಗಳು ತಡಕಾಡಿಕೊಂಡು ಬಂದಿವೆ. ಕತ್ತಲೆಯಲ್ಲಿ ಆಗಾಗ ಬೆಳಕನ್ನು ಮಾಡಿಕೊಳ್ಳಲು ಪ್ರಯತ್ನಿಸಿದ್ದೇವೆ. ನಡು ನಡುವೆ ಒಂದಷ್ಟು ಬೆಳಕು ಬೇಕೆಂದು ಆಗಾಗ ಕಡ್ಡಿ ಗೀಚ್ಚಿದ್ದೇವೆ. ದೀಪ ಮುಡಿಸಿದ್ದೇವೆ. ವೇದಶಾಸ್ತ್ರ ಪುರಾಣ ಇತಿಹಾಸ, ಕಾವ್ಯ ವಿಜ್ಞಾನಗಳ ಮತಾಪು, ಪಟಾಕಿ, ಸುರುಸುರು ಬತ್ತಿ ಹೂಬಾಣ ಸುಟ್ಟಿದ್ದೇವೆ. ತಮಸೋ ಮಾ ಜ್ಯೋತಿರ್ಗಮಯ ಎನ್ನುತ್ತ ಒಲೆ ಬೂದಿಯನ್ನೆ ಕಂಡಿದ್ದೇವೆ. ಈ ಅಜ್ಞಾನದ ಕತ್ತಲೆಗೆ ಕೊನೆಯಿರದ ಬಾಯಾರಿಕೆ ಇದೆ. ಎಷ್ಟೊಂದು ಬೆಳಕನ್ನು ಇದು ಉಟ್ಟರೂ, ತೊಟ್ಟರೂ ತಿಂದರೂ ಕುಡಿದರೂ ಇದಕ್ಕೆ ಇನ್ನೂ ಬೇಕು ಇನ್ನೂ ಬೇಕು ಎನ್ನುವ ಬಯಕೆ ಇವೆ.

"ಆದರು ಹಣತೆ ಹಚ್ಚುತ್ತೇನ ನಾನು
......................................
......................................
ನಾನು ಯಾರೋ?" [೫]

ಆದರೂ ನಾನು ಹಣತೆ ಹಚ್ಚುತ್ತೇನೆ. ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ. ಇರುವಷ್ಟುಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು ನೋಡಬಹುದೆಂಬ ಒಂದೇ ಒಂದು ಆಸೆಯಿಂದ ಹಣತೆ ಆರಿದ ಮೇಲೆ, ನೀನು ಯಾರೋ ಮತ್ತೆ ನಾನು ಯಾರೋ? ಈ ಕವನದಲ್ಲಿ ಕವಿಯು ಅಜ್ಞಾನದಿಂದ ಹೊರ ಬರಲು ಮನುಷ್ಯನಿಗೆ ತಿಳುವಳಿಕೆಯ ಬೆಳಕಿನ ಸಹಾಯಬೇಕು. ಅಂಥ ಬೆಳಕನ್ನು ಹೃನ್ಮಂದಿರದಲ್ಲಿ ಹಚ್ಚಿಕೊಳ್ಳುವ ಅಗತ್ಯವಿದೆ. ಇದರಿಂದಾಗಿ ಪರಸ್ಪರರಲ್ಲಿ ಪ್ರೀತಿ, ಗೌರವಗಳು ಮೂಡಲು ಸಾಧ್ಯವಾಗುತ್ತದೆ. ಮನುಷ್ಯ ಸೌಹಾರ್ದತೆಯ ಬಾಳನ್ನು ಬದುಕಲು ಸುಲಭವಾಗುತ್ತದೆ. ಎಂಬುವುದನ್ನು ವ್ಯಕ್ತಪಡಿಸಿದ್ದಾರೆ.

ಜಿ.ಎಸ್.ಎಸ್ ಅವರ 'ತೇರ ನೆಳೆವರು ನಾವು' ಎಂಬ ಕನವದಲ್ಲಿ ನಾಡು ನುಡಿಯ ಬಗ್ಗೆ ಅಭಿಮಾನ, ಕನ್ನಡಿಗರೆಲ್ಲ ಒಂದು ಎಂಬ ಭಾವನೆ. ನಾಡು-ನುಡಿಯ ಬಗ್ಗೆ ಕನ್ನಡಿಗರ ಜವಾಬ್ದಾರಿಗಳನ್ನು ತಿಳಿಸುವ ಕವನ ಇದಾಗಿದೆ.

"ತೇರನೆಳೆವರುನಾವು – ಎಲ್ಲಿದ್ದರೇನು?
......................................
......................................
ಕವಿಮನೋರಥಗಳನು ಬಾಳ ಬೀಖದಿಯ ಮೇಲೆ ಎಳೆಯ ಬನ್ನಿ"[೬]

ಕನ್ನಡ ಅಭಿಮಾನವುಳ್ಳವರು ಕನ್ನಡ ಭಾಷೆ-ಸಂಸ್ಕೃತಿಯನ್ನು ಬೆಳೆಸಬಲ್ಲರು ಉಳಿಸಬಲ್ಲರು ತೇರನೆಳೆವರು ನಾವು ಎಲ್ಲದ್ದರೇನು? ಬೊಂಬಾಯಿ, ಮದ್ರಾಸು, ಕಲಕತ್ತಾ, ದಿಲ್ಲಿ, ಎಲ್ಲೆಂದರಲ್ಲಿ ದೇಶ-ವಿದೇಶಗಳ ಮೂಲೆ ಮೂಲೆಗಳಲ್ಲಿದ್ದರೂ ಚಿಂತೆಯಿಲ್ಲ ಕನ್ನಡದ ಉಸಿರಾಡುವ ಎದೆಗಳಲ್ಲಿರುವ ಕನ್ನಡದ ಸತ್ವಗಳ ಬೀಜಗಳನ್ನು ಚೆಲ್ಲಿ ಬೆಳೆಯುವಂತೆ ಮಾಡಬೇಕು. ತೇರ ಮಿಣಿಯನ್ನು ಅಲ್ಲಿಯವರೆಗೂ ಹಾಸಬೇಕು. ಎಲ್ಲಿದ್ದರೇನು ಅಲ್ಲಿಂದಲೇ ತೇರನೆಳೆಯುವ ಮಿಣಿಯನ್ನು ಹಿಡಿದು ಮುನ್ನಡೆಸಲು ಸಹಾಯ ಮಾಡಬೇಕು. ಕೋಟಿ ಕೈಗಳ ಕೂಟ ಕೋಟಿ ಕಣ್ಗಳ ನೋಟ ಕೋಟಿ ಹೃದಯದ ಮಿಲನಾದಾಟದಲ್ಲಿ ಎದೆ ಎದೆಯ ಬಿಂದಿಗೆಯ ತುಂಬಿರುವಂಥ ಉತ್ಸಾಹದಭಿಷೇಕ ಉರಿಯಲ್ಲಿ ಮಿಂದು ಮುಂದೆ ಬನ್ನಿರೋ ಬನ್ನಿ ಕವಿಯ ಮನೋರಥಗಳನ್ನು ಬಾಳ ಬೀದಿಯ ಮೇಲೆ ಎಳೆಯ ಬನ್ನಿ ಎಂದು ಕರೆಯುತ್ತಾರೆ.

"ಕನ್ನಡದ ತಾಯಿ ಮುಖಬಿಂಬ ನಿಮ್ಮೆದೆಯಲ್ಲಿ ಬಿಂಬಿಸಿರೆ
......................................
......................................
ಎಲ್ಲಿಯೋ ಒಂದು ಕಡೆ ಕೈಹಾಕಿದವರು."[೭]

ಕನ್ನಡ ತಾಯಿಯ ಮುಖ ಬಿಂಬ ನಿಮ್ಮ ಎದೆಯಲ್ಲಿ ಬಿಂಬಿಸಿದರೆ ನಂಬುಗೆಯ ತುಂಬುಗೈ ನೀಡ ಬನ್ನಿ ಎಲ್ಲರೂ ಬನ್ನಿ ಭುವನೇಶ್ವರಿ ದೇವ ರಥವನ್ನೇರಿದಲು ಜೈ ರಾಜೇಶ್ವರಿ ಕನ್ನಡಿಗರೊಡತೀ! ಎಂದು ಜಯ ಘೋಷಣೆ ಮಾಡುತ್ತ ಉತ್ಸಾಹದಿಂದ

ತೇರೆನೆಳೆಯ ಬನ್ನಿರಿ. ನೀವುನಿಂತಿರುವಂಥ ನೆಲೆಗಳಿಂದ ಆ ಊರೋ ಹಿಂದೆಯೇ ಮುಂದೆಯೋ ಎಲ್ಲಿಯೋ ಒಂದು ಕಡೆ ಕೈಹಾಕಿ ತೇರ ನೆಳೆಯಿರಿ. ನಾವೆಲ್ಲರೂ ಒಂದು, ತೇರನೆಳೆವ ಜನರು ಎಳೆಯಿರೋ ಕನ್ನಡದ ತೇರ ಎಂದು ಕವಿ ಕೂಗಿ ಕರೆಯುತ್ತಾನೆ. ಕನ್ನಡ ನಾಡು, ನುಡಿ ಸಂಸ್ಕೃತಿಯನ್ನು ಬಿಂಬಿಸುವುದು ಈ ಕವಿತೆ.

ಜಿ.ಎಸ್.ಎಸ್ ಅವರ 'ಮಬ್ಬಿನಿಂದ ಮಬ್ಬಿಗೆ' ಎಂಬ ಕನವದಲ್ಲಿ ಹುಟ್ಟು ಸಾವುಗಳ ಮಧಯ, ಬಾಲ್ಯ, ಯೌವನ, ವೃದ್ದಾಪ್ಯಗಳು ಮನುಷ್ಯನ ಅವಸ್ಥೆಗಳು. ಇವು ತನ್ನವೆ ಆದ ಮೋದು, ಮಸ್ತಿ, ದುಗುಡ, ದುಮ್ಮಾನಗಳನ್ನು ಒಳಗೊಂಡಿವೆ. ಹುಟ್ಟಿನಿಂದ ಹಿಡಿದು ಸಾವಿನ ವರೆಗಿನ ಬದುಕಿನ ಚಿತ್ರಣ ಇನ್ನಿಲ್ಲವೆಂಬಂತೆ ಈ ಕವನದಲ್ಲಿ ಮೂಡಿಬಂದಿದೆ.

"ಆರುಗಂಟೆಯ ಮೊಳಗು
......................................
......................................
ಮರಳಿದರು ಮನೆಗೆ"[೮]

ಮುಂಜಾನೆ ಆರು ಗಂಟೆಯು ಮೊಳಗುತ್ತಿದೆ ಮೂಡಣದ ಹೆರಿಗೆಯ ಮನೆಯಲ್ಲಿ ಕತ್ತಲಿನ ಬಸಿರು ಬೆಸಲಾದ ಬಂಗಾರ ಮುಖದ ಕುಮಾರ ಬಾಲ ಸೂರ್ಯ ಹುಟ್ಟಿನಿಂದ ಸಡಗರವೋ ಸಡಗರ. ಉಲ್ಲಾಸವನ್ನೇ ತಂದಿದಾನೆ. ಸೂರ್ಯ, ಬಾಲ ಸೂರ್ಯೋದಯವಾದೊಡನೆ ಜೋಯಿಡುರು ಪಂಚಾಂಗವನ್ನು ತಿರುವಿ ಸಕಲ ಗೃಹಬಲ ಸ್ಥಿತಿಯನ್ನು ನೋಡಿ ಕುಂಡಲಿ ಬರೆದು ಕೊಟ್ಟು ಹೋದರು.

"ಏಳು ಗಂಟೆಯ ಮೊಳಗು
......................................
......................................
ಮೆಲ್ಲನೆಯೆ ಜಾರುತಿದೆ ಬೆಳಗು ಬಿತ್ತಿದ ಮಾಟ"

ಏಳು ಗಂಟೆಯಾದೊಡನೆ ಏಳರಿಂದ ಎಂಟರತನಕ ಸದಾ ಮಲ್ಲಿಗೆಯ ಮಳೆಗೆರೆವ ಕಣ್ಣು ಎರಡೇ ಎರಡು ಮೇಲೆ ಮುಗಿಲಿನಲ್ಲಿ, ಕೆಳಗೆ ಹಸಿರು ಸೆರಗಿನ ಮತ್ತೆ ಈ ನಡುವೆ ಬಾಯಿಟ್ಟು ಚೀಪಿದಾಗಲೆಲ್ಲ ಹಾಲನ್ನು ಸುರಿಯುವ ಚಂದ್ರ ಕುಂಭಗಳು ಎಂದೂ ಯಾವಾಗಲೂ ಗಕ್ಕನೆ ಕೈಕೂಡದ ನಲ್ಲ ತುಟಿಯ ಬಟ್ಟಲಿನಲ್ಲಿ ಹಾಲು ಸುರಿಸುತ್ತಿವೆ. ಎಂಟು ಗಂಟೆಯಾಗತ್ತಲೆ ಉಗುರು ಬೆಚ್ಚನೆಯ ಬಿಸಿಲು ಆರಂಭವಾಗುವುದು ಸುತ್ತ ಮರಗಿಡಗಳಲ್ಲಿ ಲಾಲಿ ಹಾಡುವ ಹಕ್ಕಿಗಳು ಬೊಂಬೆಗಳಿಗೂ ಜೀವ ಬುರುವುದು ಆಟಿಕೆಯ ಸಾಮಾನುಗಳ ರೂಪದಲ್ಲಿ ಕಲ್ಲು ಹರಳುಗಳೆಲ್ಲ ಮಗುವಿಗೆ ಚಿನ್ನ ರನ್ನದ ಸಮಾನವೆನಿಸುತ್ತದೆ. ಅಷ್ಟರಲ್ಲಿ ಪಾತ ಶಾಲೆಯ ಗಂಟೆ ಮಗುವನ್ನು ಕರೆಯುವುದು. ಪಾಲಕರು ಪಾಟೀ ಪುಸ್ತಕದ ಚೀಲವನ್ನು ಹೆಗಲಿಗೇರಿಸು ಹೊರಡು ಮೇಸ್ಟ್ರು ಕಾಯುತಿದ್ದಾರೆಂದು ಕಳಿಸುವರು. ಶಾಲೆಗೆ ಹೋದೊಡನೆ ಮೇಸ್ಟ್ರು ಅ, ಆ, ಇ ಈ ತಿದ್ದು ಮುಗ್ಗೊಪ್ಪಿಸು ಆಟ, ಊಟ, ಓಟದಲ್ಲಿ ಮಗು ಕಾಲು ಕಳೆಯುತ್ತಿರುವಾಗಲೇ ಬೆಳಗು ಬಿತ್ತಿದ ಮಾಟ ಮೆಲ್ಲನೆ ಜಾರುವುದು.

"ತುಂಬಿದೂರಿನ ನಡುವೆ ಗೋಪುರದ ಗಡಿಯಾರ
......................................
......................................
ಗಡಿಯಾರ ನಕ್ಕಿತು, 'ಎಂಥ ಚಪಲ' !"[೧೦]

ಸುಖ ಸಂತೋಷದಿಂದ ಇರುವಾಗಲೆ ಒಂದುಗಂಟೆ ದೂರದಲಿ ಹಸಿರು ಚಪ್ಪರದೊಳಗೆ ಮದುವೆ ಬ್ಯಾಂಡಿನಮೋಡಿ ದಾಂಪತ್ಯ ಜೀವನ ಪ್ರಾರಂಭ, ಮೈತುಂಬ ಹೂ ಮುಡಿದು ಹುಚ್ಚಾದ ಮರ ಚೈತ್ರದಲ್ಲಿ ಮೆರವಣಿಗೆ ಹೊರಟಂತ ವೈಭವ ಚಿಕ್ಕೆ ಚಿಕ್ಕೆಗೆ ಉಯ್ಯಾಲೆ ತೂಗಿ ದಿಗ್ಗಂಗತದ ನೀಲ ಗಾಜು ಗೋಡೆಗೆ ತಾಗಿ ಜೋಕಾಲಿ ಆಡುವ ಬಯಕೆ ಮಾನವನಿಗೆ ನಾ ನಿನಗೆ ಜೇನಾಗುವಾ ರಸದೇವ ಗಂಗೆಯಲ್ಲಿ ವಿಲೀನವಾಗುವಾ ಎಂಬ ಹುಮ್ಮಸ್ಸು ದಾಂಪತ್ಯದ ಬದುಕು ಅನೇಕ ಬಗೆಯ ಅನುಭವಗಳನ್ನು ಹೊಂದುತ್ತದೆ. ಸಮಯ ಸಾಗಿದೆ. ವಯಸ್ಸಿಗೆ ಜಾರುವಿಕೆಯ ಅವನಿಗೆ ಗೊತ್ತಾಗುವುದೇ ಇಲ್ಲ. ತನ್ನಲ್ಲೇ ತಾನಿರುವ ಅವನಿಗೆ ಲೋಕದ ಪರಿವೆಯೇ ಇರುವುದಿಲ್ಲ. ಕೊನೆಗೆ ಸಮಯದ ಬದುಕಿನ ಅರಿವಾದಾಗ ಅಯ್ಯೋ ಯಾವಾಗ ಈ ಮುಳ್ಳುದಾಟೀ ಮುಂದಕ್ಕೆ ಹೋಯಿತೋ ಹಿಡಿದುಕೋ ಅಲ್ಲಿ ಆ ಗಡಿಯಾರಗಳ ಮುಳ್ಳು ಭದ್ರ ಬಿಡಬೇಡ ಕೊಂಚಕಾಲ ಎಂದಾಗ ಎಂಥ ಚಪಲವಿದು ಎಂದು ಗಡಿಯಾರಗಳ ಮುಳ್ಳು ಭದ್ರ ಬಿಡಬೇಡ ಕೊಂಚಕಾಲ ಎಂದಾಗ ಎಂಥ ಚಪಲವಿದು ಎಂದು ಗಡಿಯಾರ ನಗುವುದು.

"ನಿಷ್ಕರುಣ ಗಡಿಯಾರ
......................................
......................................
ಏಳು, ಬಾಗಿಲನು ತೆಗೆ ಹೆದರಿದರು ಕೊನೆಗೆ"[೧೧]

ಗಡಿಯಾರ ನಿಷ್ಕರುಣಿ ಮುಳ್ಳು ನಾಲ್ಕನ್ನು ದಾಟಿ ಐದನ್ನು ಮುಟ್ಟಿ ಮುಂದೆ ಸಾಗುತ್ತಿದೆ. ಸೂರ್ಯನ ಕಾಲ ಕಡಿಮೆಯಾಗುತ್ತಲಿದೆ. ದಿನದಿನಕ್ಕೆ ಬಾನ ನೀಲಿಗೆ ಹೊಳಪು ಸಾಲದಾಗಿದೆ. ನೀರಿನಲ್ಲಿ ರುಚಿಯಿಲ್ಲ ಎಲ್ಲವೂ ಉದಾಸೀನ ಸಾವು ಸಮೀಪಿಸುತ್ತಿದೆ. ಎಂಬ ಭಯ, ಏನು ಕಲವೋ ಏನೋ ಸಂಜೆ ಆಕಾಶದ ತುಂಬ ಗಹಲ ನೆನಪಿನ ಚಿತ್ರಗಳು, ಮನೆ ಅಂಗಳದ ಮಬ್ಬು ಬೆಳಗಿನಲ್ಲಿ ನಡೆಯುವಾಗ ಕಣ್ಣುಗಳು ತಡವರಿಸುತ್ತವೆ. ಮಹಡಿಯ ಮೆಟ್ಟಿಲುಗಳ ಮೇಲೆ ಯಾರ್‍ಯಾರದೋ ಹೆಜ್ಜೆಯ ಸಪ್ಪಳ ಕೇಳಿಸುವುದು. ಗೋಡೆ ಗಡಿಯಾರದಲ್ಲಿ ಏಳು ಗಂಟೆ ಹೊಡೆಯುತ್ತಿದೆ ಕೇಳು. ಯಾರೋ ಬಾಗಲು ಹೊರಗೆ ನಿಂತು ಒಂದೇ ಸಮನೆ ಬಾಗಿಲನ್ನು ಬಡಿಯುತ್ತ ಏಳು ಬಾಗಿಲನ್ನು ತೆಗೆ ಹೆದರದಿರು ಕೊನೆಗೆ ಎನ್ನುತ್ತಿದ್ದಾರೆ. ಈ ಕವನದಲ್ಲಿ ಬದುಕು ಪೂರ್ಣ ವಿರಾಮವನ್ನು ಪಡೆಯುತ್ತದೆ. ಮನುಷ್ಯನ ಬದುಕಿನಲ್ಲಿ ಸಾಧಿಸಬೇಕಾದದ್ದು ಬಹಳಷ್ಟಿದೆ. ಅದನ್ನು ಸಾಧಿಸುವುದು ಹೇಗೆ? ಎಂಬ ಚಿಂತನೆಗೆ ತೊಡಗಿ ಅದರಲ್ಲಿ ಕಾರ್ಯೋನ್ಮುಖ ನಾಗಬೇಕೆಂಬುವುದು ತಿಳಿಸಿದ್ದಾರೆ.

**ಅಡಿ ಟಿಪ್ಪಣಿ**

೧ ಸಿದ್ಧಲಿಂಗಯ್ಯ ಜಿ.ಎಸ್. (ಸಂ) : ಸಾಲುದೀಪಗಳು. ಪು – ೪೨೭
೨ ಮಹಾದೇವ ಬಡಿಗೇರ (ಸಂ) : ಹೊಸಗನ್ನಡ ಕಾವ್ಯ. ಪು –೯೨
೩ ಮಹಾದೇವ ಬಡಿಗೇರ (ಸಂ) : ಹೊಸಗನ್ನಡ ಕಾವ್ಯ. ಪು – ೧೭
೪ ಮಹಾದೇವ ಬಡಿಗೇರ (ಸಂ) : ಹೊಸಗನ್ನಡ ಕಾವ್ಯ. ಪು – ೧೭–೧೮
೫ ಮಹಾದೇವ ಬಡಿಗೇರ (ಸಂ) : ಹೊಸಗನ್ನಡ ಕಾವ್ಯ. ಪು – ೧೮
೬ ಮಹಾದೇವ ಬಡಿಗೇರ (ಸಂ) : ಹೊಸಗನ್ನಡ ಕಾವ್ಯ. ಪು – ೧೯
೭ ಮಹಾದೇವ ಬಡಿಗೇರ (ಸಂ) : ಹೊಸಗನ್ನಡ ಕಾವ್ಯ. ಪು – ೧೯
೮ ಮಹಾದೇವ ಬಡಿಗೇರ (ಸಂ) : ಹೊಸಗನ್ನಡ ಕಾವ್ಯ. ಪು – ೨೦
೯ ಮಹಾದೇವ ಬಡಿಗೇರ (ಸಂ) : ಹೊಸಗನ್ನಡ ಕಾವ್ಯ. ಪು – ೨೦–೨೧
೧೦ ಮಹಾದೇವ ಬಡಿಗೇರ (ಸಂ) : ಹೊಸಗನ್ನಡ ಕಾವ್ಯ. ಪು – ೨೧ –೨೨
೧೧ ಮಹಾದೇವ ಬಡಿಗೇರ (ಸಂ) : ಹೊಸಗನ್ನಡ ಕಾವ್ಯ. ಪು – ೨೩



**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**